(b) the names of taluks which are proposed to be included by Government in the said Sub Division,

(c) the place where the office of the Assistant Commissioner will be opened ?

SRI B. BASAVALINGAPPA. (Minister for Revenue)—.

(a) No.

(b) & (c) These questions will not arise in view of the reply given to clause (a).

ಶ್ರೀ ಕಡಿದಾಳ್ ದಿವಾಕರ್.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಇದೇರೀತಿ ಉತ್ತರ ಕೊಡುತ್ತಾರೆ ಎಂದು ನನಗೆ ಗೊತ್ತಿದ್ದೇ ನಾನು ಪ್ರಶ್ನೆ ಕೇಳಿದ್ದೇನೆ. ನಾನು ಕೇಳಿದ ಪ್ರಶ್ನೆಗೂ ಶ್ರಿಮಾನ್ ಬಿ. ಎಸ್. ಪಾಟೀಲರು ಕೇಳಿದ ಪ್ರಶ್ನೆಗೂ ಹತ್ತಿರವಾದ ಸಂಬಂಧ ಉಂಟು. ೧೯೭೫ನೇ ಇಸವಿ ಜುಲೈ ೧೩ರಲ್ಲಿ ವಾಸುದೇವರಾವ್ ಏಕ ಸದಸ್ಯ ಆಯೋಗವನ್ನು ನೇಮಿಸಿದ್ದು ಅದರ ವರದಿಯನ್ನು ಸಲ್ಲಿಸ ಮಾಡಿದ್ದೀರಿ. ಅದರ ಪ್ರಕಾರ ಅದರಲ್ಲಿ ಹೊಸನಗರ ಸಬ್‌ಡಿವಿಜನ್ ಮಾಡಲು ಶಿಫಾರಸ್ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಮತ್ತು ಆ ವರದಿಯನ್ನು ಇದೇ ಸದನದಲ್ಲಿ ಚರ್ಚೆಗೆ ತರುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಯಾವಾಗ ತರುತ್ತೀರಿ ? ಮತ್ತು ಹೊಸನಗರ ರೆವಿನ್ಯೂ ಸಬ್ ಡಿವಿಜನ್ ಮಾಡುತ್ತಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಉತ್ತರ ಸರಿಯಾಗೇ ಕೊಟ್ಟಿದ್ದೇವೆ, ಶ್ರಿಮಾನ್ ಬಿ. ಎಸ್. ಪಾಟೀಲರ ಪ್ರಶ್ನೆಗೆ ಉತ್ತರ ಹೇಳುವಾಗೆ ಹೇಳಿದ್ದೇನೆ. ವರದಿಯನ್ನು ಚರ್ಚೆಮಾಡಿ ನೋಡೋಣ. ವರದಿ ಸಭೆಯ ಮುಂದೆ ಇಡುತ್ತೇವೆ, ಆಗ ನೋಡೋಣ.

ಶ್ರೀ ಕಡಿದಾಳ್ ದಿವಾಕರ್ —ಈ ವರದಿ ಕೂಡ ಮಹಾಜನ್ ವರದಿ ತರಹ ಆಗುತ್ತದೇನೋ ಎಂಬ ಅನುಮಾನ ನನಗೆ ಆದ್ದರಿಂದ ಕೇಳಿದೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಅನುಮಾನವನ್ನು ನೀವು ಇಟ್ಟುಕೊಳ್ಳಬೇಕಾಗಿಲ್ಲ,

Accident on National Highway No. 4 in Davangere Town

902 SRI PAMPAPATHY(Davangere)—Will the Minister for Public Works be pleased to state.—

(a) whether the Government is aware that due to heavy traffic in the National Highway Road No. 4 which passes through Davangere City several accidents have taken place there :

(b) whether there is a proposal before the Government to form the National Highway Road No. 4 outside the City if so, the step taken by the Government in this behalf and the period within which it will be implemented ?

SRI S. BANGARAPPA.(Minister for Public Works).—

(a) Yes.

(b) A scheme for a bye pass road outside Davangere City has been prepared and the estimate of the scheme has been forwarded for the concurrence of the Central Government The work will be taken up soon after the concurrence of the Central Government is received.

ಶ್ರೀ ಪಂಪಾಪತಿ.—ಸ್ವಾಮಿ ಕನ್ನಡದಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಇಂಗ್ಲೀಷಿನಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಆದರೆ ಅದು ನಾಲ್ಕನೇ ನಂಬರ್ ಹೆದ್ದಾರಿ. ಹೆದ್ದಾರಿಯನ್ನು ದಾವಣಗೆರೆ ನಗರದ ಹೊರವಲಯದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಯೋಜನೆಯನ್ನು ತಯಾರಿಸಲಾಗಿದ್ದು ಯೋಜನೆಯ ಅಂದಾಜನ್ನು ಕೇಂದ್ರಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ ಎಂದು ಹೇಳಿದ್ದೀರಿ ಆದರೆ ಈಗಾಗಲೇ ಅದಕ್ಕೋಸ್ಕರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಹರಿಹರದ ಹತ್ತಿರ ಸೇತುವೆ ಕಟ್ಟಿದ್ದಾರೆ. ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಹೇಗೆ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿದ್ದೀರಿ ಸ್ವಾಮಿ ?

† **ಶ್ರೀ ಎಸ್. ಬಂಗಾರಪ್ಪ.**—ಸ್ವಾಮಿ, ಇಂಗ್ಲೀಷಿನಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಇದೇ, ಸರಿ ಕನ್ನಡದಲ್ಲಿ ಅಚ್ಚಾಗಿರುವುದು ತಪ್ಪು. ದಾವಣಗೆರೆ ಹೊರವಲಯದಲ್ಲಿ ಬೈಪಾಸನ್ನು ರಚಿಸುವ ಯೋಜನೆಗೆ ಕೇಂದ್ರಸರ್ಕಾರದವರು ಅನುಮೋದನೆ ಕೊಡುವ ಮುನ್ನವೇ ಹರಿಹರದ ಹತ್ತಿರ ಇಲಾಖೆಯವರು ಹಣವನ್ನು ಖರ್ಚು ಮಾಡಿ ಕೆಲಸ ತೆಗೆದುಕೊಂಡಿರುವುದು ಬೆಳಗಿ ಶಾಧ್ಯ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೇ ನನ್ನ ಮುಂದೆ ಬಂದಿರುವಂತೆ ವರದಿ ಪ್ರಕಾರ ನಾವು ೯೬ ಪರ್ಸೆಂಟ್ ಭೂಸ್ವಾಧೀನ ಮಾಡಿಕೊಂಡಿದ್ದೇವೆ. ಇನ್ನು ೪ ಪರ್ಸೆಂಟ್ ಭೂ ಸ್ವಾಧೀನ ಮಾಡಿಕೊಳ್ಳುವ ಕಾರ್ಯ ಉಳಿದಿದೆ. ಟೆಕ್ನಿಕಲ್ ಅಪ್ರೂವಲ್‌ಗೆ ಮತ್ತು ಫೈನಾನ್ಷಿಯಲ್ ಸ್ಯಾಂಕ್ಷನ್‌ಗೆ ಕೇಂದ್ರಸರ್ಕಾರಕ್ಕೆ ಕಳಿಸಿದ್ದೇವೆ. ಅದಕ್ಕೆ ೧,೫೬,೪೨,೪೨,೦೦೦ ರೂಪಾಯಿ ಅಂದಾಜು ಮಾಡಿದ್ದೇವೆ. ಈ ಅಂದಾಜನ್ನು ೧೫೫-೫-೧೯೭೯ರಲ್ಲಿ ಕಳಿಸಿಕೊಟ್ಟಿದ್ದೇವೆ. ಅದು ಮಂಜೂರಾಗಿ ಬಂದನಂತರ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ನಗರದಲ್ಲಿ ನಾಲ್ಕನೇ ನಂಬರ್ ರಾಷ್ಟ್ರೀಯ ಹೆದ್ದಾರಿ ಹಾಯ್ದಿದ್ದು ನಗರದಲ್ಲುಂಟಾಗುವ ಏಪರೀತ ವಾಹನ ಸಂಚಾರದಿಂದಾಗಿ ಹಲವಾರು ಅಪಘಾತಗಳಾದುದು ಸರ್ಕಾರಕ್ಕೆ ತಿಳಿದಿದೆಯೇ ಎಂಬುದಕ್ಕೆ ತಿಳಿದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಈ ವರ್ಷದಲ್ಲಿ ಎಷ್ಟು ಅಪಘಾತಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಈ ವರ್ಷ ಎಷ್ಟು ಎಂಬುದು ನನ್ನ ಹತ್ತಿರ ಉತ್ತರ ಇಲ್ಲ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಹೇಳಬಹುದು. ಅಂತೂ ಹೆಚ್ಚಿನ ಅಪಘಾತಗಳು ಆಗಿರುವುದು ನಿಜ, ಅದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದೇನೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ಕಾಟನ್ ಮಿಲ್ ಜುಬ್ಲೀದವುಮಿಲ್ ಗಣೇಶ ಮಿಲ್ ಮತ್ತು ರವಿ ಆಯಿಲ್ ಮಿಲ್ ಎಲ್ಲ ಒಂದೇ ಕಡೆ ಇದೆ. ಅಲ್ಲಿ ಹೋಗಿಬರಿದರೆ ಒಂದು ರೈಲ್ವೇ ಲೆವೆಲ್ ಕ್ರಾಸಿಂಗ್ ಬರುತ್ತದೆ. ರೈಲು ಬರುವಾಗ ಗೇಟ್ ಹಾಕಿರುತ್ತಾರೆ ಇದರಿಂದ ನೂರಾರು ಪಾದಚಾರಿಗಳ ಸಂಚಾರ ನಿಂತುಹೋಗುತ್ತದೆ. ಕೆಲವು ವೇಳೆ ಟ್ರಾಫಿಕ್ ಜಾಸ್ತಿ ಆಗಿದ್ದಾಗ ಅನೇಕ ಜನ ರೈಲಿಗೆ ಸಿಕ್ಕಿ ಸತ್ತಿರುವಂಥ ನಿದರ್ಶನವೂ ಇದೆ. ಈ ಎಲ್ಲಾ ದೃಷ್ಟಿಯಿಂದ ಅಲ್ಲಿ ರಸ್ತೆ ನೇರವಾಗಿ ಮುಖ್ಯ ಎತ್ತರವಾಗಿರುವುದರಿಂದ ಅಲ್ಲಿ ಒಂದು ಅಂಡರ್ ಬ್ರಿಡ್ಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದು ಒಳ್ಳೆಯ ಸಲಹೆ ಪರಿಶೀಲಿಸುತ್ತೇನೆ.

Declaration filed in Gurpur Firka of Mangalore Taluk under land Reforms Act.

932 **Sri B. A. Mohideen**(Bantwal) —Will the Minister for Revenue be pleased to state.—

(*a*) the number of declarations filed in Gurpur Firka of Mangalore Taluk under Section 48Aof Land Reforms Act and of them how many have been decided by the Land Tribunal ;